ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಪ/2015-16 /1102-22

ದಿನಾಂಕ: 26.03.2015

ಮಾನ್ಯರೆ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ ಹದಿನೇಳನೆಯ ಸಭೆಯು ಮಾರ್ಚ್ 14, 2016ರ ಸೋಮವಾರ ಬೆಳಿಗ್ಗೆ 11.00** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

**ಕುಲಸಚಿವರು**

ಇವರಿಗೆ,

1. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು–560001.
2. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು – 560001.
3. **ಸರ್ಕಾರದ ಕಾರ್ಯದರ್ಶಿಗಳು**, ಕಂದಾಯ ಇಲಾಖೆ, (ಧಾರ್ಮಿಕ ದತ್ತಿ ವಿಭಾಗ), ಬಹುಮಹಡಿ ಕಟ್ಟಡ, ಬೆಂಗಳೂರು–560001.
4. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
5. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
6. **ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ**, ಅಧ್ಯಕ್ಷರು, ಶ್ರೀ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠ, ಎನ್.ಎಚ್.–4, ದಾವಣಗೆರೆ ರಸ್ತೆ, ಎಂ.ಕೆ. ಹಟ್ಟಿ ಅಂಚೆ, ಚಿತ್ರದುರ್ಗ ಜಿಲ್ಲೆ
7. **ಶ್ರೀ ಯೋಗೇಶ ಬಾಬು**, ಬಸವೇಶ್ವರ ನಗರ, ಬಿ.ಜಿ. ಕೆರೆ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ
8. **ಶ್ರೀ ಬಿ.ಎನ್. ಹೊಸೂರ**, ಒಕ್ಕಲಿಗ ಓಣಿ, ಸವದತ್ತಿ, ಬೆಳಗಾವಿ ಜಿಲ್ಲೆ
9. **ಡಾ. ಎಂ.ಎ. ಶೃತಿಕೀರ್ತಿ**, ಕೋಂ. ರುದ್ರೇಗೌಡ ಬಿ., ಮತ್ತೂರು ಗ್ರಾಮ, ಶಿವಮೊಗ್ಗ ತಾಲೂಕು ಮತ್ತು ಜಿಲ್ಲೆ
10. **ಶ್ರೀ ಡಿ.ಪಿ. ಅನಂತ**, ನಂ. 120, 3ನೇ ಅಡ್ಡರಸ್ತೆ, ಗಂಗಮ್ಮ ಲೇ ಔಟ್, ವಿದ್ಯಾಪೀಠ ವೃತ್ತ, ಟಿ. ಆರ್. ನಗರ ಬೆಂಗಳೂರು
11. **ಡಾ. ರಾಜಗುರು ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ**, ಕವಲೇದುರ್ಗ, ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.
12. **ಡಾ. ರಾಮಕೇಶನ್**, ನಂ.17. 1ನೇ ಮುಖ್ಯರಸ್ತೆ, ಎಲ್.ಐ.ಸಿ. ಕಾಲೋನಿ, ಶ್ರೀರಾಂಪುರ 2ನೇ ಹಂತ, ಮೈಸೂರು – 570023
13. **ಡಾ. ಎಸ್. ವೇಣುಗೋಪಾಲ್**, ನಂ. 629, 19ನೇ ಅಡ್ಡರಸ್ತೆ, ಇಂಡಸ್ಟ್ರಿಯಲ್ ಸಬರ್ಬ್, 1ನೇ ಹಂತ, ಮೈಸೂರು – 570008
14. **ಡಾ. ಸಿ. ನಂಜುಂಡಯ್ಯ**, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ – 571811
15. **ಡಾ. ಎಚ್. ಸತ್ಯನಾರಾಯಣ ರಾವ್**, ಪ್ರಾಚಾರ್ಯರು, ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು–560028.
16. **ವಿದ್ವಾನ್ ಜಿ.ಸಿ. ರಾಜಶೇಖರಯ್ಯ**, ಪ್ರಾಚಾರ್ಯರು, ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ – 572104
17. **ಡಾ. ಎಚ್.ಕೆ. ಸುರೇಶ್ ಆಚಾರ್ಯ**, ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ–576101.
18. **ಪ್ರೊ. ಶ್ರೀನಿವಾಸ ವರಖೇಡಿ**, ಡೀನ್, ಶಾಸ್ತ್ರ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
19. **ಪ್ರೊ. ವಿ. ಗಿರೀಶ್‌ಚಂದ್ರ**, ಡೀನ್, ಭಾಷಾ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
20. **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ**, ಡೀನ್, ವೇದಾಂತ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
2. ಕಛೇರಿ ಪ್ರತಿ
3. ರಕ್ಷತಾ ಪ್ರತಿ

## ೧೪.೦೩.೨೦೧೬ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೧೭ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್‌ನ ೧೭ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ ೧೪, ೨೦೧೬ರ ಸೋಮವಾರ ಬೆಳಿಗ್ಗೆ ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | |
|---|---|
| ೧. ಪ್ರೊ. ಪದ್ಮಾಶೇಖರ್, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. ಶ್ರೀ ಬಿ.ಎನ್. ಹೊಸೂರ, ಸವದತ್ತಿ | ಸದಸ್ಯರು |
| ೩. ಡಾ. ಎಂ.ಎ. ಶೃತಿಕೀರ್ತಿ, ಮತ್ತೂರು | ಸದಸ್ಯರು |
| ೪. ಶ್ರೀ ಡಿ.ಪಿ. ಅನಂತ, ಬೆಂಗಳೂರು | ಸದಸ್ಯರು |
| ೫. ರಾಜಗುರು ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕವಲೇದುರ್ಗ | ಸದಸ್ಯರು |
| ೬. ಡಾ. ಎನ್.ಕೆ. ರಾಮಶೇಷನ್, ಮೈಸೂರು | ಸದಸ್ಯರು |
| ೭. ಡಾ. ಎಸ್. ವೇಣುಗೋಪಾಲ್, ಮೈಸೂರು | ಸದಸ್ಯರು |
| ೮. ಡಾ. ಸಿ. ನಂಜುಂಡಯ್ಯ, ಪ್ರಾಚಾರ್ಯರು, ಆದಿಚುಂಚನಗಿರಿ | ಸದಸ್ಯರು |
| ೯. ಡಾ. ಎಚ್. ಸತ್ಯನಾರಾಯಣ ರಾವ್, ಪ್ರಾಚಾರ್ಯರು, ಬೆಂಗಳೂರು | ಸದಸ್ಯರು |
| ೧೦. ವಿದ್ವಾನ್ ಜಿ.ಸಿ. ರಾಜಶೇಖರಯ್ಯ, ಪ್ರಾಚಾರ್ಯರು, ತುಮಕೂರು | ಸದಸ್ಯರು |
| ೧೧. ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ | ಸದಸ್ಯರು |
| ೧೨. ಪ್ರೊ. ವೈ.ಎಸ್. ಸಿದ್ದೇಗೌಡ, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | |
|---|---|
| ೧. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಚಿತ್ರದುರ್ಗ | ಸದಸ್ಯರು |
| ೭. ಶ್ರೀ ಯೋಗೇಶಬಾಬು, ಬಿ.ಜಿ. ಕೆರೆ, ಮೊಳಕಾಲ್ಮೂರು ತಾ. | ಸದಸ್ಯರು |
| ೮. ಡಾ. ಎಚ್.ಕೆ. ಸುರೇಶ್ ಆಚಾರ್ಯ, ಪ್ರಾಚಾರ್ಯರು, ಉಡುಪಿ | ಸದಸ್ಯರು |
| ೯. ಪ್ರೊ. ಶ್ರೀನಿವಾಸ ವರಖೇಡಿ, ಡೀನ್, ಶಾಸ್ತ್ರನಿಕಾಯ | ಸದಸ್ಯರು |
| ೧೦. ಡಾ. ವಿ. ಗಿರೀಶ್‌ಚಂದ್ರ, ಡೀನ್, ಭಾಷಾ ನಿಕಾಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | | |
|---|---|---|
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ದಿನಾಂಕ: 11.01.2016ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸ್ಥಾಯೀಸಮಿತಿ 2ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್‌ನ ಸ್ಥಾಯೀ ಸಮಿತಿ 2ನೇ ಸಭೆಯು ದಿನಾಂಕ: 11.01.2016ರ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಹಲವು ಶೈಕ್ಷಣಿಕ ವಿಷಯಗಳ ಬಗೆಗೆ ಚರ್ಚಿಸಲಾಯಿತು. ಈ ಸಭೆಯ ನಡಾವಳಿಯನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ದಿನಾಂಕ: 11.01.2016ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸ್ಥಾಯೀಸಮಿತಿ 2ನೇ ಸಭೆಯ ನಡಾವಳಿಗಳನ್ನು ಸಮಗ್ರವಾಗಿ ಪರಿಶೀಲಿಸಿತು. ನಡಾವಳಿಯ ವಿಷಯ ಸಂಖ್ಯೆ 3, 7 ಮತ್ತು 12ಕ್ಕೆ ಸಂಬಂಧಿಸಿದಂತೆ ಕೆಳಕಂಡ ಬದಲಾವಣೆಗಳನ್ನು ಸೂಚಿಸಿ, ಉಳಿದಂತೆ ಎಲ್ಲಾ ವಿಷಯಗಳಿಗೆ ತನ್ನ ಅನುಮೋದನೆಯನ್ನು ನೀಡಿತು.** |

| | | |
|---|---|---|
| | | ಅಂಗೀಕರಿಸಲಾಯಿತು. ಜೊತೆಗೆ ಅದ್ವೈತ ವೇದಾಂತ<br>ವಿಷಯದ ಪಾಠ್ಯಕ್ರಮ ಸಂರಚನೆಯ<br>ವಿಷಯ ಸಂಖ್ಯೆ 3: ಅಲಂಕಾರಶಾಸ್ತ್ರದ ಪಾಠ್ಯಕ್ರಮಗಳನ್ನು ತಯಾರಿಸಲು ಅದ್ವೈತ ವೇದಾಂತ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್,<br>ವಿಭಾಗದಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುವುದರಿಂದ ಅದ್ವೈತ ವೇದಾಂತ ವಿಷಯದ<br>ಕಾರ್ಯವನ್ನು ಕೈಗೊಳ್ಳಲು ಸೂಚಿಸಲಾಯಿತು. ಟಿ.ವಿ. ಸತ್ಯನಾರಾಯಣ, ಓರಿಯಂಟಲ್ ರೀಸರ್ಚ್ ಸೇರಿಸಲು ಸೂಚಿಸಿತು.<br>ಮೈಸೂರು –ಇವರನ್ನು ಅಲಂಕಾರಶಾಸ್ತ್ರದ ಸಂರಚನೆಯ ಮಂಡಳಿಯಲ್ಲಿ ಸದಸ್ಯರನ್ನಾಗಿ ಸೇರಿಸಲು ಸೂಚಿಸಿತು. ಸ್ಥಳದಲ್ಲಿ ಪ್ರೊ. ಸಿ.<br>ವಿಷಯ ಸಂಖ್ಯೆ 7: ಭಾಷಾನಿಕಾಯದ ಸಾಮಾನ್ಯ ವಿಷಯದಲ್ಲಿ ಡಾ. ಮಧುಸೂದನ ಅಡಿಗರ ಸ್ಥಳದಲ್ಲಿ ಪ್ರೊ. ಸಿ. ಮಧುಸೂದನ<br>ನಂಜುಂಡಯ್ಯ ಇವರನ್ನು ಸೇರಿಸುವುದು ಹಾಗೂ ಸಂಸ್ಕೃತ ಭಾಷಾ ಪತ್ರಿಕೆಯ ಅಧ್ಯಯನ ಮಂಡಳಿಗೆ ಡಾ. ಮಧುಸೂದನ ಡಾ. ಎನ್.ಕೆ.<br>ಅಡಿಗರನ್ನು ಸೇರಿಸುವುದು. ಕನ್ನಡ ಭಾಷಾ ಅಧ್ಯಯನ ಮಂಡಳಿಯಲ್ಲಿ ಡಾ. ಸಿ. ಪಾಲಯ್ಯ ಅವರ ಬದಲಾಗಿ ಡಾ. ಎನ್.ಕೆ. ಮೈಸೂರು<br>ರಾಮಶೇಷನ್ ಅವರನ್ನು ಸೇರಿಸುವುದು. ಆಂಗ್ಲಭಾಷೆಯ ಅಧ್ಯಯನ ಮಂಡಳಿಗೆ ಪ್ರೊ. ರವಿಚಂದ್ರ, ಮೈಸೂರು ಕುವೆಂಪು<br>ವಿಶ್ವವಿದ್ಯಾನಿಲಯ ಇವರನ್ನು ಸೇರಿಸುವುದು. ಅಲಂಕಾರ ಶಾಸ್ತ್ರ ಅಧ್ಯಯನ ಮಂಡಳಿಗೆ ಡಾ. ಎಂ.ಎ. ಪ್ರುತ್ರಿಕೀರ್ತಿ, ಕುವೆಂಪು ರಾವ್,<br>ವಿಶ್ವವಿದ್ಯಾನಿಲಯ ಇವರನ್ನು ಸೇರಿಸುವುದು. ನ್ಯಾಯಶಾಸ್ತ್ರ ಅಧ್ಯಯನ ಮಂಡಳಿಗೆ ಡಾ. ಎಚ್. ಸತ್ಯನಾರಾಯಣ ರಾವ್, ಅಧ್ಯಯನ<br>ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು · ಇವರನ್ನು ಸೇರಿಸುವುದು. ಸಂಗಣಕ ಅಧ್ಯಯನ ಸೇರಿಸುವುದು.<br>ಮಂಡಳಿಯಲ್ಲಿ ಪ್ರೊ. ವೀರಭದ್ರಪ್ಪ ಅವರ ಸ್ಥಳದಲ್ಲಿ ಪ್ರೊ. ಗುರು, ಮೈಸೂರು ವಿಶ್ವವಿದ್ಯಾನಿಲಯ ಇವರನ್ನು ಸೇರಿಸುವುದು. ಶ್ರೀ<br>ಸಂಸ್ಕೃತ ಸಾಹಿತ್ಯ ಅಧ್ಯಯನ ಮಂಡಳಿಯಲ್ಲಿ ಡಾ. ಕೆ. ಶಿವರುದ್ರಪ್ಪ ಅವರ ಜಾಗದಲ್ಲಿ ಡಾ. ನಾಗೇಂದ್ರ, ವೇದ<br>ಕಾಲಭೈರವೇಶ್ವರ ಸಂಸ್ಕೃತ–ವೇದ–ಆಗಮ ಕಾಲೇಜು, ಆದಿಚುಂಚನಗಿರಿ ಇವರನ್ನು ಸೇರಿಸುವುದು. ವೀರಶೈವ ಅವರನ್ನು<br>ಅಧ್ಯಯನ ಮಂಡಳಿಯಲ್ಲಿ ಪ್ರೊ. ಸಿ. ಚಂದ್ರಶೇಖರಯ್ಯನವರ ಬದಲಾಗಿ ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿ ವೇದಿಕ್<br>ಸೇರಿಸುವುದು. ವಿಶಿಷ್ಟಾದ್ವೈತ ವೇದಾಂತ ಅಧ್ಯಯನ ಮಂಡಳಿಗೆ ಪ್ರೊ. ಕೆ.ಇ. ದೇವನಾಥನ್, ಕುಲಪತಿಗಳು,<br>ಯೂನಿವರ್ಸಿಟಿ, ತಿರುಪತಿ ಅವರನ್ನು ಸೇರಿಸುವುದು. ಒಂದು ವರ್ಷದಲ್ಲಿ 10<br>ವಿಷಯ ಸಂಖ್ಯೆ 12: ಕಾಲೇಜು/ಪಾಠಶಾಲೆಗಳ ಎಸ್.ಸಿ/ಎಸ್.ಟಿ ಅಧ್ಯಾಪಕರು/ಶಿಕ್ಷಕರಿಗೆ ಪ್ರತ್ಯೇಕವಾಗಿ ಅಧ್ಯಾಪಕರು/ಶಿಕ್ಷಕರಿಗೆ<br>ದಿನಗಳ 3 ತರಬೇತಿ ಶಿಬಿರಗಳನ್ನು ನಡೆಸಲು ಹಾಗೂ ಸಾಮಾನ್ಯ ವರ್ಗದ ಎಸ್.ಸಿ/ಎಸ್.ಟಿ<br>ವರ್ಷದಲ್ಲಿ ಒಂದು ಬಾರಿ ತರಬೇತಿ ಶಿಬಿರ ನಡೆಸಲು ಸೂಚಿಸಲಾಯಿತು. |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ʻಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ಕ್ಕೆ ತಿದ್ದುಪಡಿಯನ್ನು ಮಾಡುವ ಬಗೆಗೆ.**<br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ<br>(ತಿದ್ದುಪಡಿ) ಅಧಿನಿಯಮ 2011ರ (2011ರ ಫೆಬ್ರವರಿ 4ರಂದು ಘನತೆವೆತ್ತ ರಾಜ್ಯಪಾಲರಿಂದ ಅಂಕಿತಗೊಂಡಿದೆ)<br>ಅನ್ವಯ ʻಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ಕ್ಕೆ ಕೆಲವು ಬದಲಾವಣೆಯನ್ನು<br>ಅಳವಡಿಸಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ದಿನಾಂಕ: 22.12.2015ರಂದು ನಡೆದ 31ನೇ<br>ಸಭೆಯಲ್ಲಿ ಮಂಡಿಸಲಾಗಿತ್ತು. "ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ಕ್ಕೆ ತಿದ್ದುಪಡಿಯನ್ನು<br>ಸರ್ಕಾರಕ್ಕೆ ನಿಯಮಾನುಸಾರ ಶಿಫಾರಸ್ಸು ಮಾಡಲು ಸಭೆಯು ಅಂಗೀಕರಿಸಿತು. ಈ ಬಗ್ಗೆ ಅಧಿನಿಯಮ<br>ಸಮಿತಿಯ ಮೂಲಕ ಕ್ರಮವಹಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು." ಅದರಂತೆ, ಪರಿನಿಯಮ<br>ಪರಿಶೀಲನಾ ಸಮಿತಿಯು ದಿನಾಂಕ: 01.03.2016ರ ಮಂಗಳವಾರ ಪೂರ್ವಾಹ್ನ 11.00 ಗಂಟೆಗೆ ಸಭೆ ಸೇರಿ,<br>ಅಧಿನಿಯಮಕ್ಕೆ ತಿದ್ದುಪಡಿಗಳನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತದೆ. ಈ ತಿದ್ದುಪಡಿ ಪರಿನಿಯಮವನ್ನು<br>ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು 'ಅಧಿನಿಯಮ ಪರಿಶೀಲನಾ ಸಮಿತಿ'ಯ ಶಿಫಾರಸ್ಸುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತನ್ನ ಒಪ್ಪಿಗೆಯನ್ನು ನೀಡಿತು ಹಾಗೂ ತಿದ್ದುಪಡಿಗಳನ್ನು ಒಳಗೊಂಡ ಅಧಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಸೂಚಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಯೋಗ ವಿಷಯವನ್ನು ಎಲ್ಲ ಸಂಸ್ಕೃತ ಕಾಲೇಜುಗಳಲ್ಲಿ ಅಳವಡಿಸುವ ಬಗೆಗೆ**<br>ಯೋಗ ವಿಷಯವನ್ನು (Theory) ಹಾಗೂ ಅಭ್ಯಾಸವನ್ನು (Practice) ಒಂದು ವಿಷಯವಾಗಿ ಕರ್ನಾಟಕದ ಎಲ್ಲ ಸಂಸ್ಕೃತ ಕಾಲೇಜುಗಳಲ್ಲಿ ಅಳವಡಿಸಬಹುದಾಗಿದೆ. ಅಂತಾರಾಷ್ಟ್ರೀಯ ದಿನವಾಗಿ ಯೋಗ ದಿನಾಚರಣೆಯನ್ನು ಆಚರಿಸುವ ಹಿನ್ನೆಲೆಯಲ್ಲಿ ಯೋಗ ಶಿಕ್ಷಣವನ್ನು ಎಲ್ಲ ಕಾಲೇಜುಗಳಲ್ಲಿ ಕಡ್ಡಾಯ ನೀಡಿ ಅವರಿಗೆ ಯೋಗದಲ್ಲಿ ಪ್ರಮಾಣಪತ್ರವನ್ನು ನೀಡಬಹುದಾಗಿದೆ. ಹಾಗಾಗಿ ಈ ಅಂಶವನ್ನು ಅಳವಡಿಸಲು ಸಭೆಯಲ್ಲಿ ಕೋರಿದೆ. |
| | ನಿರ್ಣಯ | **ಸಭೆಯು ವಿದ್ಯಾರ್ಥಿಗಳಿಗೆ ಯೋಗ ಶಿಕ್ಷಣವನ್ನು ಕಡ್ಡಾಯವಾಗಿ ನೀಡಲು ಸೂಚಿಸಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ವರ್ಣಪದಕವನ್ನು ನೀಡುವ ಬಗೆಗೆ.**<br>ವಿಶ್ವವಿದ್ಯಾಲಯದ ಶಾಸ್ತ್ರೀ (ಬಿ.ಎ) ಹಾಗೂ ಆಚಾರ್ಯ (ಎಂ.ಎ) ವಿದ್ಯಾರ್ಥಿಗಳಿಗೆ ಆಯಾ ವಿಷಯಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸ್ವರ್ಣಪದಕವನ್ನು ನೀಡಲಾಗುತ್ತಿದೆ. ಕೆಲವು ಬಾರಿ ಒಂದೊಂದು |

| | | |
|---|---|---|
| | | ವಿಭಾಗದಲ್ಲಿ ಒಬ್ಬನೇ/ಳೇ ವಿದ್ಯಾರ್ಥಿಯು ಇರುತ್ತಾನೆ/ಳೆ. ಹಾಗೆಯೇ ಒಂದು ಅಥವಾ ಹೆಚ್ಚಿನ ಬಾರಿ ಅನುತ್ತೀರ್ಣನಾ/ಳಾಗಿ ಪುನಃ ಅದೇ ಪರೀಕ್ಷೆಯನ್ನು ಬರೆದು ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣನಾಗಿರುತ್ತಾನೆ/ಳೆ. ಆಯಾ ವಿಭಾಗದಲ್ಲಿ ಕನಿಷ್ಟ ನಾಲ್ಕು ಮಂದಿ ಇರಬೇಕು. ಅನುತ್ತೀರ್ಣರಾದವರಿಗೆ ಸ್ವರ್ಣಪದಕಕ್ಕೆ ಅವಕಾಶವಿಲ್ಲ. ಇಂತಹ ಸಂದರ್ಭಗಳಲ್ಲಿ ಸ್ವರ್ಣಪದಕವನ್ನು ನೀಡುವ ಬಗ್ಗೆ ನಿಯಮವನ್ನು ರಚಿಸಬೇಕಿರುತ್ತದೆ. ಈ ಸಂಬಂಧ ವಿಷಯವನ್ನು ಚರ್ಚೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ವರ್ಣಪದಕವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿಯನ್ನು ರಚಿಸಲು ಸಭೆಯು ಒಪ್ಪಿಗೆಯನ್ನು ನೀಡಿತು. |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಪಿಎಚ್.ಡಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನರಿಗೆ ಶಿಷ್ಯವೇತನ ನೀಡುವ ವಿಶ್ವವಿದ್ಯಾಲಯಗಳಲ್ಲಿ ವಿಕಲಚೇತನರ ಸೆಲ್ ತೆರೆಯುವ ಪೂರಕ ಸೌಕರ್ಯಗಳ ಜೊತೆಗೆ ತ್ರಿಚಕ್ರ ವಾಹನ ನೀಡುವ ಬಗೆಗೆ.**<br>ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಪರಿಷತ್ತಿನ ಆದೇಶವು (ಇಡಿ 202 ಯುಎನ್ಇ 2015) ಪಿಎಚ್.ಡಿ. ವಿಕಲಚೇತನ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಎಲ್ಲ ವಿಶ್ವವಿದ್ಯಾಲಯಗಳು ತ್ರಿಚಕ್ರ ವಾಹನ ಸೇರಿದಂತೆ ಸರ್ಕಾರದಿಂದ ದೊರಕುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಸಂಶೋಧನ ಕೇಂದ್ರವನ್ನು ತೆರೆದು ಸಮಿತಿಯನ್ನು ರಚಿಸಿ ವರದಿ ಸಲ್ಲಿಸಲು ತಿಳಿಸಿದೆ. ಈ ಸಂಬಂಧ ಅನುಮತಿಗಾಗಿ ಕೋರಿದೆ. |
| | ನಿರ್ಣಯ | **ಸರ್ಕಾರದಿಂದ ದೊರೆಯುವ ಎಲ್ಲ ಬಗೆಯ ಸೌಲಭ್ಯಗಳನ್ನು ವಿಕಲಚೇತನ ವಿದ್ಯಾರ್ಥಿಗಳಿಗೆ ನೀಡಲು ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ಶ್ರೀ ಹುಲಿಕಲ್ ನಟರಾಜ್ ಅವರ 'ವೈಚಾರಿಕ ಮನೋಭಾವ' ಜಾಗೃತಿ ಕಾರ್ಯಕ್ರಮವನ್ನು ನಡೆಸುವ ಬಗೆಗೆ.**<br>ಉನ್ನತ ಶಿಕ್ಷಣ ಪರಿಷತ್ತಿನ ಆದೇಶದಂತೆ (ಇಡಿ 39 ಯುಎನ್ಇ 2015) ವಿದ್ಯಾರ್ಥಿ ಹಾಗೂ ಶಿಕ್ಷಕರಲ್ಲಿ ವೈಚಾರಿಕ ಮನೋಭಾವ ಬೆಳೆಸಲು ಶ್ರೀ ಹುಲಿಕಲ್ ನಟರಾಜ್ ಅವರ ಪ್ರಯೋಗಾತ್ಮಕ ಕಾರ್ಯಕ್ರಮವನ್ನು ಎಲ್ಲ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ನಡೆಸಲು ಹಾಗೂ ಈ ಕಾರ್ಯಕ್ರಮಕ್ಕೆ ಬರುವ ಎಲ್ಲ ಉಪನ್ಯಾಸಕರಿಗೆ ಒಓಡಿ ನೀಡಲು ಕ್ರಮವಹಿವಂತೆ ಪತ್ರಿಸಿರುತ್ತಾರೆ. ಈ ಸಂಬಂಧ ಅನುಮತಿಯನ್ನು ಕೋರಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಶ್ರೀ ಹುಲಿಕಲ್ ನಟರಾಜ್ ಅವರ 'ವೈಚಾರಿಕ ಮನೋಭಾವ' ಜಾಗೃತಿ ಕಾರ್ಯಕ್ರಮವನ್ನು ನಡೆಸಲು ಒಪ್ಪಿಗೆ ಸೂಚಿಸಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ಪಿ.ಜಿ. ಹಾಗೂ ಯು.ಜಿ. ವಿದ್ಯಾರ್ಥಿಗಳ ಕೋರ್ಸನ್ನು ಆಕರ್ಷಕವನ್ನಾಗಿ ಮಾಡುವ ಬಗೆಗೆ**<br>ಉನ್ನತ ಶಿಕ್ಷಣ ಪರಿಷತ್ತಿನ ಆದೇಶದಂತೆ (ಇಡಿ 192 ಯುಆರ್ಸಿ 2015) ವಿಶ್ವವಿದ್ಯಾಲಯದ ಎಲ್ಲ ಕೋರ್ಸ್‌ಗಳನ್ನು ಯು.ಜಿ.ಸಿ ನಿಯಮದ ಪ್ರಕಾರ ಆಕರ್ಷಕವಾಗಿ ರಚಿಸುವಂತೆ ಸೂಚಿಸಿರುತ್ತದೆ. ಈ ಸಂಬಂಧ ವಿಷಯವನ್ನು ಚರ್ಚೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಪ್ರೊ. ಚಿದಾನಂದಗೌಡ ಅವರ ಸಮಿತಿಯು ನೀಡಿರುವ ವರದಿಯನ್ನು ಯುಜಿಸಿ ಮಾರ್ಗಸೂಚಿಯಂತೆ ಅಳವಡಿಸಿಕೊಳ್ಳಲು ಸಭೆಯು ಒಪ್ಪಿಗೆಯನ್ನು ನೀಡಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಉನ್ನತ ಶಿಕ್ಷಣ ವಲಯದಲ್ಲಿ ಸಂಶೋಧನೆ ಕೈಗೊಳ್ಳುವ ಕುರಿತು ಕಾರ್ಯನೀತಿ ರೂಪಿಸುವ ಕುರಿತು**<br>ಉನ್ನತ ಶಿಕ್ಷಣ ಪರಿಷತ್ತಿನ ಆದೇಶದಂತೆ (ಇಡಿ 298 ಯುಆರ್ಸಿ 2015) ರಾಜ್ಯ ಉನ್ನತ ಶಿಕ್ಷಣ ವಲಯದಲ್ಲಿ ಸಂಶೋಧನೆ ಕೈಗೊಳ್ಳುವ ಕುರಿತು ಕಾರ್ಯನೀತಿ ರೂಪಿಸುವ ಬಗ್ಗೆ ಎಲ್ಲ ವಿಶ್ವವಿದ್ಯಾಲಯಗಳು ಪ್ರಶಾಸನ ಸಮಿತಿ ಹಾಗೂ ಪ್ರಶಿಕ್ಷಣಪರಿಷತ್ತಿನ ಸಭೆಯಲ್ಲಿ ಯು.ಜಿ.ಸಿ. ನಿಯಮಗಳ ಪ್ರಕಾರ ಚರ್ಚಿಸಿ ನಿರ್ಣಯಿಸಿ ತಿಳಿಸುವಂತೆ ಸೂಚಿಸಿರುತ್ತದೆ. ಈ ಹಿನ್ನೆಲೆಯಲ್ಲಿ ವಿಷಯವನ್ನು ಚರ್ಚೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಯುಜಿಸಿ ಮಾರ್ಗಸೂಚಿಯಂತೆ ರಾಜ್ಯ ಉನ್ನತ ಶಿಕ್ಷಣ ವಲಯದಲ್ಲಿ ಸಂಶೋಧನೆ ಕೈಗೊಳ್ಳುವ ಕುರಿತು ಕಾರ್ಯನೀತಿಯನ್ನು ರೂಪಿಸಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ವಿದ್ವತ್ತರಗತಿಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಬಗೆಗೆ.**<br>ವಿದ್ವತ್ತರಗತಿಗಳಲ್ಲಿ ಒಂದು ವರ್ಷ ಅನುತ್ತೀರ್ಣರಾದ ವಿದ್ಯಾರ್ಥಿಗಳು ಮರು ವರ್ಷ ಪರೀಕ್ಷೆಯನ್ನು ಬರೆಯುತ್ತಾರೆ. ಆ ವರ್ಷವನ್ನು ಹೊರತು ಪಡಿಸಿ 2ನೆಯ ಬಾರಿಯಿಂದ ಪರೀಕ್ಷೆಯನ್ನು ಬರೆಯುವಾಗ ಅನುತ್ತೀರ್ಣ ವಿದ್ಯಾರ್ಥಿಯು ಆ ವರ್ಷ ನಿಗದಿಯಾದ ನೂತನ ಪಾಠ್ಯಕ್ರಮಕ್ಕೆ ಅನುಗುಣವಾಗಿ ಪರೀಕ್ಷೆಯನ್ನು ಬರೆಯಬಹುದಾಗಿದೆ. ಬಹಳ ಬಾರಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುವುದರಿಂದ ಪ್ರತೀ ವರ್ಷವೂ ಹಳೆಯ ಪಾಠ್ಯಕ್ರಮಗಳನ್ನು ಮತ್ತೆ ನೀಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಚರ್ಚೆಗಾಗಿ ಸಭೆಯಲ್ಲಿ ವಿಷಯವನ್ನು ಮಂಡಿಸಿದೆ. |

| | | |
|---|---|---|
| | ನಿರ್ಣಯ | ಉನ್ನತ ಶಿಕ್ಷಣ ಪರಿಷತ್ತಿನ ನಿಯಮದಂತೆ, ಬಿ.ಎ. ಪದವಿಯನ್ನು ಪೂರೈಸಲು 3 + 3 ವರ್ಷಗಳು ಹಾಗೂ ಎಂ.ಎ. ಪದವಿಯನ್ನು ಪೂರೈಸಲು 2 + 2 ವರ್ಷಗಳ ಕಾಲಾವಧಿಯನ್ನು ನಿಗದಿಪಡಿಸಲು ಸಭೆಯು ಸೂಚಿಸಿತು. |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ದೇಗುಲಮಠ, ಕನಕಪುರ –ಈ ಕಾಲೇಜಿಗೆ ಎಂ.ಎ. ವಿದ್ವದುತ್ತಮಾ ಪ್ರಥಮ ವರ್ಷದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ (ರಿ.) ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ದೇಗುಲಮಠ, ಕನಕಪುರ –ಈ ಕಾಲೇಜಿಗೆ 2012–13ನೇ ಸಾಲಿನಲ್ಲಿ ಬಿ.ಎ. ವಿದ್ವನ್ಮಧ್ಯಮಾ ಪ್ರಥಮ ವರ್ಷದ (ಅಲಂಕಾರಶಾಸ್ತ್ರ ಮತ್ತು ಶಕ್ತಿವಿಶಿಷ್ಟಾದ್ವೈತ ವೇದಾಂತ ಶಾಸ್ತ್ರ) ತರಗತಿಗಳನ್ನು ಅನುದಾನರಹಿತವಾಗಿ ಪ್ರಾರಂಭಿಸಲು ಅನುಮತಿ ನೀಡಲಾಗಿತ್ತು. ಅದರಂತೆ, ಸ್ವಾಭಾವಿಕ ಬೆಳವಣಿಗೆಯ ಆಧಾರದ ಮೇಲೆ 2013–14ನೇ ಸಾಲಿನಲ್ಲಿ ದ್ವಿತೀಯ ವರ್ಷ ಹಾಗೂ 2014–15ನೇ ಸಾಲಿನಲ್ಲಿ ಅಂತಿಮ ವರ್ಷದ ತರಗತಿಗಳನ್ನು ವಿಶ್ವವಿದ್ಯಾಲಯದ ಅನುಮತಿ ಪಡೆದು ಪ್ರಾರಂಭಿಸಿರುತ್ತಾರೆ. ದಿನಾಂಕ: 17.07.2015ರಲ್ಲಿ ಸಂಸ್ಥೆಯ ಆಡಳಿತಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿ, ಅಲಂಕಾರಶಾಸ್ತ್ರ ಮತ್ತು ಶಕ್ತಿವಿಶಿಷ್ಟಾದ್ವೈತ ವೇದಾಂತ ಶಾಸ್ತ್ರಗಳ ಎಂ.ಎ. ವಿದ್ವದುತ್ತಮಾ ಪ್ರಥಮ ವರ್ಷದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಷರತ್ತುಗಳಿಗೊಳಪಟ್ಟು ಹಾಗೂ ಅನುದಾನರಹಿತವಾಗಿ 2015–16ನೇ ಸಾಲಿನಿಂದ ಎಂ.ಎ. ವಿದ್ವದುತ್ತಮಾ (ಅಲಂಕಾರಶಾಸ್ತ್ರ ಮತ್ತು ಶಕ್ತಿವಿಶಿಷ್ಟಾದ್ವೈತ ವೇದಾಂತ ಶಾಸ್ತ್ರ) ಪ್ರಥಮ ವರ್ಷದ ತರಗತಿಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿದ್ದು, ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ದೇಗುಲಮಠ, ಕನಕಪುರ –ಈ ಕಾಲೇಜಿಗೆ ಎಂ.ಎ. ವಿದ್ವದುತ್ತಮಾ ಪ್ರಥಮ ವರ್ಷದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದನ್ನು ಸಭೆಯು ಚರ್ಚಿಸಿತು. ಯುಜಿಸಿ ಅರ್ಹತೆಯುಳ್ಳ ಸಿಬ್ಬಂದಿಗಳು ಇರುವ ಪ್ರಯುಕ್ತ ಎಂ.ಎ. ವಿದ್ವದುತ್ತಮಾ ಪ್ರಥಮ ವರ್ಷದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ಜೆ.ಎಸ್.ಎಸ್. ಮಹಾವಿದ್ಯಾಪೀಠ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಜೆ.ಎಸ್.ಎಸ್. ಸಂಸ್ಕೃತ ಕಾಲೇಜು, ಸುತ್ತೂರು –ಈ ಕಾಲೇಜಿಗೆ ಬಿ.ಎ. ವಿದ್ವನ್ಮಧ್ಯಮಾ ದ್ವಿತೀಯ ಮತ್ತು ತೃತೀಯ ವರ್ಷದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗೆಗೆ.**<br>ಜೆ.ಎಸ್.ಎಸ್. ಮಹಾವಿದ್ಯಾಪೀಠ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಜೆ.ಎಸ್.ಎಸ್. ಸಂಸ್ಕೃತ ಕಾಲೇಜು, ಸುತ್ತೂರು –ಈ ಕಾಲೇಜಿಗೆ 2013–14ನೇ ಸಾಲಿನಿಂದ ಬಿ.ಎ. ವಿದ್ವನ್ಮಧ್ಯಮಾ (ಅಲಂಕಾರಶಾಸ್ತ್ರ, ಶಕ್ತಿವಿಶಿಷ್ಟಾದ್ವೈತ ವೇದಾಂತ ಮತ್ತು ಜ್ಯೋತಿಷ್ಯಶಾಸ್ತ್ರ) ಪ್ರಥಮ ವರ್ಷದ ತರಗತಿಗಳನ್ನು ಅನುದಾನರಹಿತವಾಗಿ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿತ್ತು. ಸ್ವಾಭಾವಿಕ ಬೆಳವಣಿಗೆಯ ಆಧಾರದ ಮೇಲೆ ಈ ಸಂಸ್ಥೆಯವರು 2014–15ನೇ ಸಾಲಿನಲ್ಲಿ ಬಿ.ಎ. ವಿದ್ವನ್ಮಧ್ಯಮಾ ದ್ವಿತೀಯ ವರ್ಷದ ತರಗತಿಗಳನ್ನು ಹಾಗೂ 2015–16ನೇ ಸಾಲಿನಲ್ಲಿ ಬಿ.ಎ. ವಿದ್ವನ್ಮಧ್ಯಮಾ ತೃತೀಯ ವರ್ಷದ ತರಗತಿಗಳನ್ನು ಪ್ರಾರಂಭಿಸಿರುತ್ತಾರೆ. ಈ ತರಗತಿಗಳನ್ನು ಪ್ರಾರಂಭಿಸಲು ವಿಶ್ವವಿದ್ಯಾಲಯದಿಂದ ಸಂಸ್ಥೆಯು ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ಈ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆಗಳನ್ನು ಬರೆಯಲು ವಿಶ್ವವಿದ್ಯಾಲಯವು ಅನುಮತಿಯನ್ನು ನೀಡಿದೆ. ಬಿ.ಎ. ವಿದ್ವನ್ಮಧ್ಯಮಾ ದ್ವಿತೀಯ ಹಾಗೂ ತೃತೀಯ ವರ್ಷದ ತರಗತಿಗಳನ್ನು ಪ್ರಾರಂಭಿಸಿರುವುದಕ್ಕೆ ಪೂರ್ವಾನ್ವಯವಾಗುವಂತೆ ಅನುಮತಿ ನೀಡಲು ಈ ಸಂಸ್ಥೆಯವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನುಮತಿ ಯನ್ನು ನೀಡಬಹುದಾಗಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. |
| | ನಿರ್ಣಯ | **ಜೆ.ಎಸ್.ಎಸ್. ಸಂಸ್ಕೃತ ಕಾಲೇಜು, ಸುತ್ತೂರು –ಈ ಕಾಲೇಜಿನಲ್ಲಿ ಈಗಾಗಲೇ ಬಿ.ಎ. ವಿದ್ವನ್ಮಧ್ಯಮಾ ದ್ವಿತೀಯ ಮತ್ತು ತೃತೀಯ ವರ್ಷದ ತರಗತಿಗಳನ್ನು ಪ್ರಾರಂಭಿಸಿರುವುದನ್ನು ಗಮನಿಸಿದ ಸಭೆಯು ಅನುಮತಿಯನ್ನು ನೀಡಿತು. ಇನ್ನು ಮುಂದೆ ಯಾವುದೇ ತರಗತಿಗಳನ್ನು ಹೊಸದಾಗಿ ಪ್ರಾರಂಭಿಸಲು ಮೊದಲು ವಿಶ್ವವಿದ್ಯಾಲಯದಿಂದ ಕಡ್ಡಾಯವಾಗಿ ಅನುಮತಿ ಪಡೆಯುವಂತೆ ಸಂಸ್ಥೆಗಳಿಗೆ ಸೂಚಿಸುವಂತೆ ಸಭೆಯು ನಿರ್ಣಯಿಸಿತು.** |

ಪ್ರೊ. ವೈ.ಎಸ್. ಸಿದ್ದೇಗೌಡ
ಸದಸ್ಯ ಕಾರ್ಯದರ್ಶಿ

ಪ್ರೊ. ಪದ್ಮಾಶೇಖರ್
ಅಧ್ಯಕ್ಷರು